
ಛಾಯಾಚಿತ್ರ ೧೦೭

## ಛಾಯಾಚಿತ್ರ ೧೦೮

ಈ ಚಿತ್ರವನ್ನು ಸ್ವಾಮೀಜಿ ಬಹಳ ಅನಾರೋಗ್ಯದಿಂದ ಬಳಲುತ್ತಿದ್ದಾಗ ತೆಗೆಯಲಾಗಿತ್ತು. ಇದೂ ಶಿಲ್ಲಾಂಗ್‌ನಲ್ಲಿ ತೆಗೆದ ಚಿತ್ರ. ಪೂರ್ವ ಬಂಗಾಳದ ಪ್ರವಾಸವನ್ನು ಮುಗಿಸಿ ಬಂದ ನಂತರ ಸ್ವಾಮೀಜಿಯವರ ಆರೋಗ್ಯ ಕ್ಷೀಣಿಸುತ್ತಾ ಬಂದಿತು. ತಮ್ಮ ಆರೋಗ್ಯವನ್ನಾಗಲಿ, ಜೀವನವನ್ನೇ ಆಗಲಿ ಕಾಪಾಡಿಕೊಳ್ಳಬೇಕೆಂಬ ಇಚ್ಛೆ ಈಗ ಸ್ವಾಮೀಜಿಯವರಲ್ಲಿ ಇರಲಿಲ್ಲ. ಅವರು ಮೊದಲಿನಿಂದಲೂ ಹೇಳುತ್ತಿದ್ದರು: "ಸದ್ಯ, ಈ ಜೀವನ ಶಾಶ್ವತವಲ್ಲವಲ್ಲ! ಅದಕ್ಕೆ ನಾವು ಆಭಾರಿಯಾಗಲೇಬೇಕು!"

ಸ್ವಾಮೀಜಿ ತಮ್ಮ ಶಿಷ್ಯ ಶರಚ್ಚಂದ್ರನಿಗೆ ಹೇಳುತ್ತಾರೆ, "ಶ್ರೀರಾಮಕೃಷ್ಣರು ದೇಹತ್ಯಾಗ ಮಾಡುವ ಎರಡು–ಮೂರು ದಿನಗಳಿಗೆ ಮೊದಲು, ಯಾರನ್ನು ಕಾಳಿ ಎಂದು ಅವರು ಕರೆಯುತ್ತಿದ್ದರೋ, ಅವಳು ನನ್ನ ದೇಹದೊಳಕ್ಕೆ ಪ್ರವೇಶಿಸಿಬಿಟ್ಟಳು. ಅವಳು ನನ್ನನ್ನು ಸುಮ್ಮನಿರಲು ಬಿಡುವುದೇ ಇಲ್ಲ. ನಾನು ಕೆಲಸ ಮಾಡುತ್ತಲೇ ಸಾಯಬೇಕೆಂದು ನಿರ್ಧರಿಸಿ ಬಿಟ್ಟಿದ್ದೇನೆ."


ಛಾಯಾಚಿತ್ರ ೧೦೮

## ಛಾಯಾಚಿತ್ರ ೧೦೯

೧೯೦೧ರ ಮೇ ತಿಂಗಳ ಕೊನೆಯ ಭಾಗದಲ್ಲಿ ಸ್ವಾಮೀಜಿಯವರ ಆರೋಗ್ಯ ಮತ್ತಷ್ಟು ಕ್ಷೀಣಿಸುತ್ತ ಬಂತು. ಸ್ವಾಮಿ ನಿರಂಜನಾನಂದರು ಹಾಗೂ ಇನ್ನಿತರ ಸಹೋದರ ಸಂನ್ಯಾಸಿಗಳು ಕೊಲ್ಕತ್ತಾದ ಪ್ರಸಿದ್ಧ ವೈದ್ಯರೊಬ್ಬರಿಂದ ಚಿಕಿತ್ಸೆ ಪಡೆಯುವಂತೆ ಅವರನ್ನು ಒಪ್ಪಿಸಿದರು. ಅವರ ಚಿಕಿತ್ಸೆ ಅತ್ಯಂತ ಕಠಿಣವಾಗಿತ್ತು. ಆಗ ಸೆಕೆಗಾಲವಾಗಿದ್ದರೂ, ೨೧ ದಿನ ಒಂದು ಹನಿ ನೀರನ್ನೂ ಕುಡಿಯುವಂತಿರಲಿಲ್ಲ; ಒಂದಿಷ್ಟು ಉಪ್ಪನ್ನೂ ಮುಟ್ಟುವಂತಿರಲಿಲ್ಲ. ಸ್ವಾಮೀಜಿ ಈ ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರು.

ಚಿಕಿತ್ಸೆ ಮುಗಿದ ಮೇಲೆ ಸ್ವಾಮೀಜಿ ಶರಚ್ಚಂದ್ರನ ಬಳಿ ಹೇಳಿದರು, "ನನ್ನ ಗುರುಭಾಯಿಗಳ ಆಜ್ಞೆಗೆ ನಾನು ವಿಧೇಯನಾಗಿದ್ದೆ. ಏಕೆಂದರೆ ಅವರೆಲ್ಲ ನನ್ನ ನ್ನು ಅದೆಷ್ಟು ಪ್ರೀತಿಸುತ್ತಾರೆ! ಅವರ ಕೋರಿಕೆಯನ್ನು ತಳ್ಳಿಹಾಕಲು ನನ್ನಿಂದ ಸಾಧ್ಯವಿಲ್ಲ."


ಒಟ್ಟಿನಲ್ಲಿ, ಯಾವ ಚಿಕಿತ್ಸೆಯಿಂದಲೂ ಅಂಥ ಪ್ರಯೋಜನವೂ ಕಂಡುಬರಲಿಲ್ಲ. ಆದರೆ ಅವರ ಶರೀರ ಮಾತ್ರ ಮೇಲ್ನೋಟಕ್ಕೆ ಸ್ವಲ್ಪ ತುಂಬಿಕೊಂಡಂತೆ ಕಾಣುತ್ತಿತ್ತು. ◆


ಛಾಯಾಚಿತ್ರ ೧೦೯


# ಚಂದ್ರ ಆರಾಧಿಸಿದ ದೇವ – ಸೋಮನಾಥ


**ಕಥೆ : ಈರೋಡ್ ಟಿ. ಕೃಷ್ಣ** **ಚಿತ್ರ : ಶಂಕರ್**

**1** ದಕ್ಷನು ತನ್ನ ರಾಣಿ ಅಸಗ್ನಿಯೊಂದಿಗೆ ಹಿಮಾಲಯದ ತಪ್ಪಲಲ್ಲಿರುವ ರಾಜ್ಯವನ್ನು ಆಳುತ್ತಿದ್ದ. ಅವನಿಗೆ ಐವತ್ತು ಮಂದಿ ಹೆಣ್ಣುಮಕ್ಕಳಿದ್ದರು. ಅವರಲ್ಲಿ ಇಪ್ಪತ್ತೇಳು ಮಕ್ಕಳನ್ನು ಚಂದ್ರನಿಗೆ ಕೊಟ್ಟು ಮದುವೆ ಮಾಡಿದ್ದನು.




**2** ಕೆಲವು ಕಾಲ ಚಂದ್ರ ತನ್ನೆಲ್ಲ ಇಪ್ಪತ್ತೇಳು ಮಂದಿ ಪತ್ನಿಯರನ್ನು ಸಮಾನವಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಆದರೆ ಕ್ರಮೇಣ ಅವನು ಸೌಂದರ್ಯ ಮತ್ತು ತಾರುಣ್ಯದಲ್ಲಿ ಎಲ್ಲರನ್ನೂ ಮೀರಿಸಿದ್ದ ರೋಹಿಣಿಯಲ್ಲಿ ಹೆಚ್ಚು ಅನುರಕ್ತನಾದ. ಇದರಿಂದ ಬೇಸತ್ತ ಇತರ ಪತ್ನಿಯರು..











**5** ಚಂದ್ರನ ಮೇಲೆ ಮಾವನ ಬೈಗುಳ ಯಾವ ಪರಿಣಾಮವನ್ನೂ ಬೀರಲಿಲ್ಲ. ಆಗ ದುಃಖತಪ್ತರಾದ ಅವನ ಇಪ್ಪತ್ತಾರು ಮಂದಿ ಪತ್ನಿಯರು ತಂದೆಯ ಬಳಿಗೆ ಹೋಗಿ ಅತ್ತರು.


**6** ಕೋಪಗೊಂಡ ದಕ್ಷ ಕೂಡಲೇ ಚಂದ್ರನ ಬಳಿಗೆ ಹೋದ.



7 ದಕ್ಷನ ಶಾಪದಿಂದಾಗಿ ಚಂದ್ರನ ಪ್ರಭೆ ಕ್ಷೀಣಿಸತೊಡಗಿತು. ಹೆದರಿದ ಚಂದ್ರನು ರಕ್ಷಣೆಗಾಗಿ ದೇವತೆಗಳ ಬಳಿಗೋಡಿದ.




8 ಎಲ್ಲರೂ ಬ್ರಹ್ಮನ ಬಳಿಗಿ ಹೋಗಿ ಚಂದ್ರನಿಂದಾದ ತೊಂದರೆಯನ್ನು ವಿವರಿಸಿದರು.




9 ಚಂದ್ರನನ್ನು ರಕ್ಷಿಸುವಂತೆ ದೇವತೆಗಳೆಲ್ಲರೂ ಬ್ರಹ್ಮನನ್ನು ಮತ್ತೆ ಮತ್ತೆ ಬೇಡಿಕೊಂಡರು.

